MYSORE LEGISLATIVE ASSEMBLY

SEVENTEENTH DAY.

Saturday, 27th February 1965.

The House met in the Assembly Chamber, Vidhana Soudha, Bangalore, at Thirty Minutes past Eight of the Clock.

[MR. SPEAKER (SRI B. VAIKUNTA BALIGA, B.A., B.L.) in the Chair.]

STARRED QUESTIONS

(to which oral answers were given.)

Opening of Fair Price Depots in Malur Taluk.

*Q.—132. Sri S. V. RAME GOWDA (Malur).—

Will the Government be pleased to state:—

(*a*) whether they intend to open Fair Price Depots in jurisdiction of each panchayat in Malur Taluk early in view of prevalence of famine conditions and failure of ragi crops in that area;

(*b*) if so, whether they will make arrangements to open such depots immediatly in the said areas for the benefit of villages?

A.—Sri M. V. KRISHNAPPA (Minister for Revenue).—

(*a*) Distribution of foodgrains and sugar is arranged through the Co-operative Societies in the Panchayat areas in which there are Co-operative Societies and through Village Panchayats where there are no such Co-operative Societies. There are 34 such distributing units in Malur Taluk now.

(*b*) Arrangements have already been made for opening Fair Price Depots wherever necessary. Additional Depots will be opened if circumstances warrant the opening of such depots.

ಶ್ರೀ ಎಸ್. ವಿ. ರಾಮೇಗೌಡ.—ಉತ್ತರದಲ್ಲಿ ಹೇಳಿರುವಂತೆ ಧಾನ್ಯಹನ್ನು ಹಂಚುವಾಗ ಯಾವ ಆಧಾರದ ಮೇಲೆ ಹಂಚುತ್ತೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಧಾರವೇನೂ ಇದರಲ್ಲಿಲ್ಲ. ಅಲ್ಲಲ್ಲಿ ಕೋ-ಆಪರೇಟಿವ್ ಸೊಸೈಟಿಗಳಿವೆ. ಅಲ್ಲಿಗೆ ಎಷ್ಟು ಬರುತ್ತದೋ ಅದನ್ನು ನೋಡಿಕೊಂಡು ಸೊಸೈಟಿಗಳವರು ಹಂಚಿಕೆ ಮಾಡುತ್ತಾರೆ. ಅನೇಕ ಕಡೆ ಅಲ್ಲಿ ಕಾರ್ಡುಗಳನ್ನೇ ಕೊಟ್ಟಿಲ್ಲ.

ಶ್ರೀ ಎಸ್. ವಿ. ರಾಮೇಗೌಡ.—ಈಗ ಪಟ್ಟಣವಾನಗಳಲ್ಲಿ ಹಂಚುತ್ತಿರುವಂತೆ ಪಾಪ್ಯುಲೇಷನ್ ಬೇಸಿಸ್ ಮೇಲೆ ಇಲ್ಲಿಯೂ ಹಂಚಲಿಕ್ಕೆ ಏಕೆ ಏರ್ಪಾಡು ಮಾಡಬಾರದು?

ಶ್ರೀ ಎಂ. ವಿ. ಕೃಷ್ಣಪ್ಪ.—ಪಟ್ಟಣಗಳಿಗೂ ಹಳ್ಳಿಗಳಿಗೂ ಏನು ವ್ಯತ್ಯಾಸವಿಲ್ಲ ಎಂದು ಹೇಳಿದರೆ ಅದು ಹೇಗೆ ಸಾಧ್ಯ ? ತಾವೇ ಯೋಚನೆ ಮಾಡಿ. ನಾನೂ ಮಾಲೂರು ತಾಲ್ಲೂಕಿನಿಂದ ಬಂದವನು. ನನಗೂ ಅಲ್ಲಿನ ಪರಿಸ್ಥಿತಿ ಗೊತ್ತು. ಅಲ್ಲಿ ಈಗ ಕೆರೆ ಕಟ್ಟೆಗಳೆಲ್ಲ ತುಂಬಿ ಒಳ್ಳೆಯ ಭತ್ತದ ಬೆಳೆ ಈ ಸಾರಿ ಬಂದಿದೆ. ಸ್ವಲ್ಪ ಅಲ್ಲಿ ಕೆಲವು ಭಾಗದಲ್ಲಿ ರಾಗಿ ಬೆಳೆ ಕೆಟ್ಟಿದೆ ಎಂದು ತಿಳಿದು ಬಂದಿದೆ. ಅದರ ಬಗ್ಗೆ ಮುಂದೆ ಯೋಚನೆ ಮಾಡುತ್ತೇವೆ. ಪಟ್ಟಣಗಳಲ್ಲಿ ಹಳ್ಳಿಯಲ್ಲಿರುವ ಜನರಂತೆ ಯಾವ ಜಮೀನೂ ಇಲ್ಲ.

ಶ್ರೀ ಬಿ. ಚನ್ನಬೈರೇ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿರುವ ಕೂಲಿಗಾರರಿಗೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೂಲಿಗಾರರಿಗಾಗಿಯೇ ಅಲ್ಲಿ ಹಂಚುತ್ತಿರುವುದು. ಇತರರು ಯಾರೂ ಹೆಚ್ಚಾಗಿ ಡಿಪೋಗಳ ಮುಂದೆ ಬಂದು ನಿಲ್ಲುವುದಿಲ್ಲ.

ಶ್ರೀ ಕೆ. ವಿ. ರೇವಣ ಸಿದ್ದಪ್ಪ.—ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುತ್ತಿರುವವರಿಗೆ ಜಮೀನಿಲ್ಲದಿದ್ದರೆ ಅವರೇನು ಮಾಡಬೇಕು ? ಪಟ್ಟಣದಲ್ಲಿ ವಾಸಮಾಡುವವರಿಗೆ ಜಮೀನಿಲ್ಲ ಎಂದು ಹೇಗೆ ಹೇಳುವುದಕ್ಕಾಗುತ್ತದೆ ? ಜನಸಂಖ್ಯೆಯ ಆಧಾರದಮೇಲೆ ಹಂಚುವಾಗ ಹಳ್ಳಿಗಳಲ್ಲಿ ವಾಸ ಮಾಡುವ ಜನರೆಷ್ಟಿದ್ದಾರೆನ್ನುವುದನ್ನು ಇರಾಖೆಯವರು ನೋಡಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಾಗಿ ಸರಬರಾಜು ಮಾಡುವುದೊಳ್ಳೆಯದಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳುವುದನ್ನೆಲ್ಲ ಒಪ್ಪಿಕೊಳ್ಳಬಹುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ರಾಗಿಯೂ ಕೂಡ ಹಳ್ಳಿಗಳಲ್ಲಿ ಹೆಚ್ಚಾಗಿ ಸಿಗುತ್ತಿಲ್ಲ. ಆದ್ದರಿಂದ ಅಲ್ಲಿಗೆ ಹೆಚ್ಚಾಗಿ ಗೋಧಿ ಮತ್ತು ನಕ್ಕರೆ ಸಿಗುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಧಿ ಹೇಗೆ ಬರುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಗೋಧಿ ಬಂದಾಗ ಅದಕ್ಕೆ ತಕ್ಕಂತೆ ಹಂಚಬೇಕಾಗುತ್ತದೆ. ಅಲ್ಲದೆ ಬೆಂಗಳೂರಿನಲ್ಲಿ ಸ್ಯಾಚ್ಯೂಟರಿ ರೇಷನಿಂಗ್ ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರದವರು ಆದೇಶ ಕಳುಹಿಸಿರುವುದರಿಂದ ಅದರಂತೆ ಇಲ್ಲಿ ಜಾರಿಗೆ ತರಲಾಗಿದೆ. ಅಲ್ಲದೆ ಬೆಂಗಳೂರಿನಲ್ಲಿ ಈಗ ಜನಸಂಖ್ಯೆ 15 ಲಕ್ಷಕ್ಕಿಂತ ಮೇಲೆ ಇರುವುದರಿಂದ ಇಲ್ಲಿ ಸರಿಯಾಗಿ ಧಾನ್ಯಗಳನ್ನು ಹಂಚಬೇಕಾಗಿ ಬರುತ್ತದೆ. ಇದೇ ರೀಯಾಯಿತಿಗಳನ್ನು ಹಳ್ಳಿಗಳಲ್ಲಿಯೂ ಕೊಡಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಪಟ್ಟಣಗಳಿಗೆ ಹೆಚ್ಚಾಗಿ ಬಂದಾಗ ಹಳ್ಳಿಗಳಿಗೂ ಹೆಚ್ಚು ಕಳುಹಿಸಬಹುದು, ಕಡಿಮೆ ಬಂದಾಗ ಕಡಮೆ ಕೊಡಬೇಕಾಗಿ ಬರುತ್ತದೆ.

ಶ್ರೀ ಕೆ. ಲಕ್ಕಪ್ಪ.—ಆಹಾರ ಧಾನ್ಯಗಳನ್ನು ಹಂಚುವಾಗ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಹಂಚುತ್ತಾರೆ. ಅಲ್ಲಿ ಸರಿಯಾದ ರೆಕ್ಕಪತ್ರಗಳನ್ನಿಡದೆ ಭಷ್ಟಾಚಾರ ಮಾಡುತ್ತ ಹೋಗುತ್ತಿರುವುದರಿಂದ ಹಳ್ಳಿಗಾಡಿನ ಜನಕ್ಕೆ ಸರಿಯಾದ ದವಸಧಾನ್ಯಗಳು ಸಿಗುತ್ತಿಲ್ಲ ಎನ್ನುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಭಷಾವಣೆನೋ ಅಥವಾ ಚಾಪಾವಣೆನೋ ಮಾಡುವುದು ಎಂದರೆ ನನಗೇನೂ ಅದರ ಅರ್ಥ ತಿಳಿಯುವುದಿಲ್ಲ. (ನಗು).

Sri SANJEEVANATH AIKALA.—Is it the policy of the Government to open Fair Price shops only where famine conditions exist ? For instance, in the coastal areas of Mangalore it is not actual famine, but foodgrains are not at all available. May I know whether it is the policy of the Government to open Fair Price shops there also ?

Sri M. V. KRISHNAPPA.—Even if there is no famine, it is the duty of the Government to see that foodgrains are supplied to those who cannot produce and who have no food.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೆಂಗಳೂರಿನಲ್ಲಿ ಗೋಧಿ ಹಂಚುತ್ತಿರುವಂತೆ ಇತರ ಭಾಗಗಳಲ್ಲಿಯೂ ಗೋಧಿ ಸರಬರಾಜನ್ನು ಜಾಸ್ತಿ ಮಾಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಿಲ್ಲೆಗಳಿಗೆ ಎಷ್ಟು ಗೋಧಿ ಬರುತ್ತದೋ ಅದನ್ನು ಗಮನದಲ್ಲಿಟ್ಟುಕೊಂಡು ಅಲ್ಲಿರುವ ಜಿಲ್ಲಾಧಿಕಾರಿಗಳು ಎಲ್ಲ ಕಡೆಗಳಿಗೂ ಹಂಚುತ್ತಾರೆ. ಸಾಮಾನ್ಯವಾಗಿ ಹಳ್ಳಿಗಳಿಗೆ ಎಷ್ಟು ಬೇಕೋ ಅದನ್ನು ನೋಡಿಕೊಂಡು ನ್ಯಾಯವಾಗಿ ಹಂಚುತ್ತಿದ್ದಾರೆ.

Mr. SPEAKER.—Sri K. Lakkappa is authorised on behalf of Sri S. M. Krishna to put the Question No. 175.